7. ಮಲಪ್ರಭ ಎಣ್ಣೆ ಗಿರಣಿ (ನಿ) ನರಗುಂದ	16.04	7.94
8. ರೈತರ ಸಹಕಾರಿ ಎಣ್ಣೆ ಗಿರಣಿ (ನಿ) ಬೆಂಕದಕಟ್ಟಿ	3.95	2.40
9. ಗದಗ ಸಹಕಾರ ಎಣ್ಣೆ ಗಿರಣಿ, ಗದಗ	1.78	1.04
10. ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ ಸಂಗೂರ	1.28	1.11
11. ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ, ಖಾನಾಪುರ	3.25	1.13
12. ರೈತರ ಸಹಕಾರ ಸಕ್ಕರೆ ಕಾರ್ಖಾನೆ ಮುದೋಳ	3.19	0.50
13. ವರದ ಸಹಕಾರ ಸಕ್ಕರೆ ಕಾರ್ಖಾನೆ ಡಂಬರಮತ್ತೂರ (ಪಾಲುಗಾರಿಕೆ)	4.84	1.90
14. ಟಿ ಎ ಪಿ ಸಿ ಎಂ ಎಸ್ ಕುಂದಗೋಳ	2.00	1.40
15. ಟಿ ಎ ಪಿ ಸಿ ಎಂ ಎಸ್ ಬ್ಯಾಡಗಿ	2.09	2.03

ಮಹದಾಯಿ ಯೋಜನೆ ಕುರಿತು

1857(2312): ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಹಾದಾಯಿ ಯೋಜನೆ ಈಗ ಯಾವ ಹಂತದಲ್ಲಿದೆ.

ಆ. ಮಹಾದಾಯಿ ನದಿಯಿಂದ ಮಲಪ್ರಭಾ ನದಿಗೆ ಎಷ್ಟು ಟಿ.ಎಂ.ಸಿ. ನೀರನ್ನು ಬಿಡಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ. ಮಹಾದಾಯಿ ತಿರುವು ಯೋಜನೆಗೆ ಸಂಬಂಧಿಸಿದ ಕಳಸಾನಾಲಾ ಮತ್ತು ಬಂಡೂರ್‌ನಾಲಾ ಯೋಜನೆಗಳಿಂದ ಮಹಾದಾಯಿ ನದಿಯಿಂದ ಮಲಪ್ರಭಾ ನದಿಗೆ ಹುಬ್ಬಳ್ಳಿ -ಧಾರವಾಡ ಅವಳಿ ನಗರಗಳ ಮತ್ತು ಸುತ್ತಮುತ್ತಲಿನ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗೆ 7.56 ಟಿಎಂಸಿ ನೀರನ್ನು ವರ್ಗಾಯಿಸಲು ಏಪ್ರಿಲ್ 2002ರಲ್ಲಿ ನೀಡಿದ ಅನುಮೋದನೆಯನ್ನು ಗೋವಾ ಸರ್ಕಾರದ ಒತ್ತಾಯದ ಮೇರೆಗೆ ಇತ್ತೀಚೆಗೆ ಕೇಂದ್ರ ಸರ್ಕಾರವು ತಡೆಹಿಡಿದಿದ್ದು ಇದನ್ನು ತೆರವುಗೊಳಿಸಲು ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಲಾಗುತ್ತಿದೆ.

ಆ. ಕಳಸಾನಾಲಾ ಮತ್ತು ಬಂಡೂರ್‌ನಾಲಾ ಯೋಜನೆಗಳ ಅನುಷ್ಠಾನದಿಂದ ಮಹಾದಾಯಿ ಕಣಿವೆಯಿಂದ ಮಲಪ್ರಭಾ ನದಿಗೆ 7.56 ಟಿ.ಎಂ.ಸಿ. ನೀರನ್ನು ವರ್ಗಾಯಿಸಲು ಯೋಚಿಸಲಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಹರಾಜು ಕುರಿತು

1858(2173): ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) : ಮಾನ್ಯ ಕೃಷಿಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಾಮರಾಜನಗರ, ಮಂಡ್ಯ ಹಾಗೂ ಇತರರ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಯಾವ ಮಾನದಂಡದ ಆಧಾರದ ಮೇಲೆ ಬೆಲ್ಲ ಹಾಗೂ ಇತರೆ ಪದಾರ್ಥಗಳ ಹರಾಜಿನ ಬೆಲೆಯನ್ನು ನಿಗಧಿಪಡಿಸಲಾಗಿದೆ.

ಆ. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸರ್ಕಾರದ ವತಿಯಿಂದ ಹರಾಜಿನಲ್ಲಿ ಭಾಗವಹಿಸಲು ಯಾವ ಮಂಡಳಿ ಹಾಗೂ ಸರ್ಕಾರೇತರ ಸ್ವಾಮ್ಯಕ್ಕೆ ಅವಕಾಶ ನೀಡಲಾಗಿದೆ (ವಿವರ ನೀಡುವುದು);